**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**ಎಸ್.ಸಿ.54/2024**

| | | |
|---|---|---|
| ಸಾಕ್ಷಿದಾರರ ಹೆಸರು | : | ಆಕಾಶ |
| ತಂದೆಯ ಹೆಸರು | : | ಬಸವರಾಜಪ್ಪ |
| ವಯಸ್ಸು | : | 21 ವರ್ಷ |
| ಉದ್ಯೋಗ | : | ಚಾಲಕ |
| ವಾಸ ಸ್ಥಳ | : | ಚಿಕ್ಕಬೂದಿಹಾಳ |

ಪಿ.ಡಬ್ಲ್ಯೂ 1

ಸಿ.ಡಬ್ಲ್ಯೂ 1

ದಿ: 23-08-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

1. ಚಾಸಾ-5 ಮತ್ತು 7 ರವರ ಪರಿಚಯ ಇದೆ. ಅವರು ನಮ್ಮ ಎಸ್.ಆರ್. ಬಾರ್ ಆ್ಯಂಡ್ ರೆಸ್ಟೋರೆಂಟ್ ನಲ್ಲಿ supplier ಆಗಿ ಕೆಲಸ ಮಾಡುತ್ತಾರೆ. ಸದರಿ ಬಾರ್ ನಲ್ಲಿ ನಾನು ಕ್ಯಾಶಿಯರ್ ಆಗಿ ಕೆಲಸ ಮಾಡುತ್ತಿದ್ದೇನೆ. ಬಾರ್ ನ ಮಾಲೀಕರು ಚಾಸಾ-6 ರವರು ಇರುತ್ತಾರೆ. ಬಾರ್ ನಲ್ಲಿ ನನ್ನ ಕೆಲಸ ಬೆಳಿಗ್ಗೆ 9.00 ರಿಂದ ರಾತ್ರಿ 11.00 ಗಂಟೆಯವರೆಗೆ ಇರುತ್ತದೆ. ಆ ಬಾರ್ ಬಂಬೂ ಬಜಾರ್ ರಸ್ತೆಯಲ್ಲಿ ಗಣೇಶ ಗುಡಿ ಹತ್ತಿರ ಬರುತ್ತದೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನಾನು ನೋಡಿದ್ದೇನೆ. ದಿಃ 05-11-2023 ರಂದು ರಾತ್ರಿ 10.00-10.10 ರ ಸಮಯದಲ್ಲಿ ನಮ್ಮ ಬಾರ್ ಗೆ ಬಂದು Cold beer ಕೇಳಿದರು. ಅದಕ್ಕೆ ನಾನು Cold beer ಕೋಲ್ಡ್ ಬಿಯರ್ ಖಾಲಿ ಆಗಿವೆ, Hot

beer ಇದೆ ಅಂತ ಹೇಳಿದೆ. ಆ ರೀತಿ ಉತ್ತರ ಕೊಟ್ಟಿದ್ದಕ್ಕೆ 'ಬಾರ್ ಯಾಕೆ ಇಟ್ಟುಕೊಂಡಿದ್ದೀಯಾ ಕ್ಲೋಸ್ ಮಾಡು' ಅಂತ ಹೇಳಿದರು ಮತ್ತು ನನಗೆ ಚಾಕುವಿನಿಂದ ಕೊಲ್ಲಲು ಪ್ರಯತ್ನಿಸಿದರು ಆಗ ನಾನು ತಪ್ಪಿಸಿಕೊಂಡೆ. ಆಗ ನನ್ನೊದಿಂಗೆ ಚಾಸಾ-5, 7 ಅಲ್ಲಿ ಇದ್ದರು. ಆಗ ನಾನು ಮಾಲೀಕರಿಗೆ ಫೋನ್ ಮಾಡಿ ವಿಷಯ ತಿಳಿಸಿದೆನು. ಅವರು 10-15 ನಿಮಿಷದಲ್ಲಿ ಬಂದರು. ಆ ವಿಷಯ ಬಗ್ಗೆ ಮಾಲೀಕರಾದ ಚಾಸಾ-6 ರವರು ಬಂದು ನ್ಯಾಯಾಲಯದ ಮುಂದೆ ಇರುವ ಆರೋಪಿತರಿಗೆ ಕೇಳಿದರು. Cold beer ಬೇಕಿದ್ದರೆ ಬೇರೆ ಕಡೆ ತೆಗೆದುಕೊಳ್ಳಿ ಯಾಕೆ ಹೀಗೆ ಗಲಾಟೆ ಮಾಡುತ್ತಿದ್ದಾರೆ ಅಂತ ಕೇಳಿದರು. ಮಾಲೀಕರಿಗೆ 1 ನೇ ಆರೋಪಿ ಚಾಕು ಹಾಕಿ ಕೊಲ್ಲಲು ಹೋದರು ಆಗ ಅವರು ತಪ್ಪಿಸಿಕೊಂಡರು. ಮಾಲೀಕರಿಗೆ ಆರೋಪಿತರು ಕೈನಿಂದ ಹೊಡೆದರು. ಆ ಚಾಕು ನೆಲಕ್ಕೆ ಬಿದ್ದಾಗ ನಾನು ಅದನ್ನು ಚಾಸಾ-7 ರವರಿಗೆ ಕೊಟ್ಟೆನು.

ಈ ಹಂತದಲ್ಲಿ ಸಾಕ್ಷಿದಾರರು ಸಮಯ ಕೋರಿರುವುದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ದಾವಣಗೆರೆ.

ದಿ: 14-10-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

3. ಬಾರ್ ಮಾಲೀಕರು ಸ್ಥಳಕ್ಕೆ ಬಂದು 1 ಮತ್ತು 2 ನೇ ಆರೋಪಿತರಿಗೆ " ನಮ್ಮ ಬಾರ್ ನಲ್ಲಿ Cold beer ಇರುವುದಿಲ್ಲ ಯಾಕೆ ನಮ್ಮ ಹುಡುಗರ ಹತ್ತಿರ ಗಲಾಟೆ ಮಾಡುತ್ತೀರಾ" ಅಂತ ಕೇಳಿದಾಗ ಆರೋಪಿತರು " Cold beer ಇಲ್ಲ ಅಂದರೆ ಬಾರ್ ಯಾಕೆ ನಡೆಸುತ್ತೀರಾ " ಅಂತ ದಬ್ಬಾಳಿಕೆ ಮಾಡಿದರು. ನಮ್ಮ ಮಾಲೀಕರಿಗೆ ದಬ್ಬಾಡಿ ನೆಲಕ್ಕೆ ಕೆಡವಿ ಚಾಕುವಿನಿಂದ ಮಾಲೀಕರನ್ನು ಸಾಯಿಸುವ ಉದ್ದೇಶದಿಂದ 1 ನೇ ಆರೋಪಿ ಚಾಕು ಹಾಕಲು ಹೋದಾಗ ನಾನು, ಚಾಸಾ-7, ಸತೀಶ ಮತ್ತು ನಾಗರಾಜರವರು ಗಲಾಟೆಯನ್ನು ಬಿಡಿಸಿದೆವು. ನಂತರ 2 ನೇ ಆರೋಪಿ ಅದೇ ಚಾಕು ಹಾಕಲು ನಮ್ಮ ಮಾಲೀಕರಿಗೆ ಹೋದಾಗ ಆ ಚಾಕು ನೆಲಕ್ಕೆ ಬಿತ್ತು, ಚಾಸಾ-7 ರವರು ಆ ಚಾಕುವನ್ನು ತೆಗೆದುಕೊಳ್ಳಲು ಹೋದಾಗ 2 ನೇ ಆರೋಪಿಯು ಚಾಕುವಿನಿಂದ ಚಾಸಾ-7 ರವರಿಗೆ ಹಾಕಲು ಹೋದಾಗ, ಚಾಸಾ-7 ರವರ ಕೈಗೆ ಗಾಯವಾಯಿತು.

ಈ ಹಂತದಲ್ಲಿ ಸಾಕ್ಷಿದಾರರು ಸಮಯ ಕೋರಿರುವುದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

ದಿ: 13-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

4. 1 ನೇ ಆರೋಪಿತ ನಮ್ಮ ಮಾಲೀಕರಿಗೆ ಸಾಯಿಸುವ ಉದ್ದೇಶದಿಂದ ಚಾಕು ಹಾಕಲು ಹೋದಾಗ ನಮ್ಮ ಜೊತೆ ಕೆಲಸ ಮಾಡುತ್ತಿದ್ದ ಮಂಜುನಾಥ ಎಂಬುವವರು ಬಿಡಿಸಲು ಬಂದಾಗ ಚಾಕು ಕೆಳಗೆ ಬಿತ್ತು, 2 ನೇ ಆರೋಪಿತನು ಚಾಕು ತೆಗೆದುಕೊಳ್ಳಲು ಹೋದಾಗ ಮಂಜುನಾಥರವರ ಬಲಗೈಗೆ ಚಾಕು ತಗಲಿ ಗಾಯವಾಯಿತು. ಆಗ ನಾನು, ಮಂಜುನಾಥ, ಸತೀಶರವರು ಸೇರಿ 1 ಮತ್ತು 2 ನೇ ಆರೋಪಿತರನ್ನು ಹಿಡಿದುಕೊಂಡೆವು. 2 ನೇ ಆರೋಪಿಯ ಕೈಯಿಂದ ಚಾಕುವನ್ನು ಮಂಜುನಾಥ ಎಂಬುವವರು ಕಸಿದುಕೊಂಡರು. ಅವರಿಬ್ಬರು ನಮಗೆ ಅವಾಚ್ಯ ಶಬ್ದಗಳಿಂದ ಬೈದರು ಮತ್ತು ಜೀವ ಸಹಿತ ಬಿಡುವುದಿಲ್ಲ ಅಂತ ಬೆದರಿಕೆ ಹಾಕಿದರು. ತದನಂತರ ಜಗಳವನ್ನು ಬಿಡಿಸಿ ಚಾಸಾ-6 ಮತ್ತು 7 ರವರನ್ನು ದಾವಣಗೆರೆಯ ಸಿ.ಜಿ. ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದೆವು. ದಿಃ 06-11-2023 ರಂದು ಸಂಜೆ 4.00 ಗಂಟೆಗೆ ದೂರನ್ನು ಕೊಟ್ಟಿರುತ್ತೇನೆ. ಆ ದೂರನ್ನು ಈಗ ನೋಡಿ ಅದರಲ್ಲಿರುವ ನನ್ನ ಸಹಿ ಗುರುತಿಸುತ್ತೇನೆ. ದೂರನ್ನು ನಿಪಿ-1 ಅಂತ, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಅಂತ ಗುರುತಿಸಲಾಯಿತು. ನಿಪಿ-1 ರ ದೂರು ನನ್ನ ಬರವಣಿಗೆಯಲ್ಲಿರುತ್ತದೆ.

5. ದೂರು ಕೊಟ್ಟ ನಂತರ ಮಾರನೇ ದಿನ ಪೊಲೀಸರು ನಮ್ಮ ಬಾರ್ ಆ್ಯಂಡ್ ರೆಸ್ಟೋರೆಂಟ್ ಗೆ ಭೇಟಿ ನೀಡಿದರು. ಬೆಳಿಗ್ಗೆ 11.30 ಯಿಂದ ಮಧ್ಯಾಹ್ನ 12.30 ರವರೆಗೆ ಪೊಲೀಸರು ಮಹಜರ ಮಾಡಿದರು. ನಾನು ಮತ್ತು ಮಂಜುನಾಥರವರು ಮಹಜರಗೆ ಜಾಗ ತೋರಿಸಿಕೊಟ್ಟಿದ್ದೆವು. ಆ ಸಂದರ್ಭದಲ್ಲಿ ಚಾಸಾ-2 ಮತ್ತು 3 ರವರು ಹಾಜರಿದ್ದು, ಮಹಜರೆಗೆ ಸಹಿ ಮಾಡಿರುತ್ತಾರೆ. ಆ ಮಹಜರನ್ನು ಈಗ ನೋಡಿ ಅದರಲ್ಲಿರುವ ನನ್ನ ಸಹಿ ಗುರುತಿಸುತ್ತೇನೆ. ಮಹಜರನ್ನು ನಿಪಿ-2 ಅಂತ, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಅಂತ ಗುರುತಿಸಲಾಯಿತು. ಮಹಜರ ಮಾಡುವ ಸಮಯದಲ್ಲಿ

ಮಂಜುನಾಥರವರು ಚಾಕುವನ್ನು ಹಾಜರುಪಡಿಸಿದ್ದು, ಅದನ್ನು ಪೊಲೀಸರು ವಶಪಡಿಸಿಕೊಂಡರು. ಆ ಚಾಕುವನ್ನು ನೋಡಿದರೆ ಗುರುತಿಸುತ್ತೇನೆ. ಚಾಕು FSL ಗೆ ಹೋಗಿದ್ದು, ಅದು ಸೀಲ್ ಆಗಿದ್ದು ಅದನ್ನು ತೆರೆದ ನ್ಯಾಯಾಲಯದಲ್ಲಿ ಓಪನ್ ಮಾಡಿ ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸುತ್ತಾರೆ. ಚಾಕುವನ್ನು ಮು.ಮಾ.1 ಅಂತ ಗುರುತಿಸಲಾಯಿತು. ಮಹಜರ ಸಮಯದಲ್ಲಿ ತೆಗೆದ ಪೋಟೋಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ನಿಪಿ-3 ಮತ್ತು 4 ಅಂತ ಗುರುತಿಸಲಾಯಿತು. ನಿಪಿ-4 ರಲ್ಲಿ ಕಾಣುವ ಚಾಕು ಈಗ ನ್ಯಾಯಾಲಯದ ಮುಂದೆ ಇರುವ ಮು.ಮಾ.1 ರ ಚಾಕು ಇರುತ್ತದೆ.

6. ಆರೋಪಿತರು ನಮ್ಮ ಬಾರ್ ಆ್ಯಂಡ್ ರೆಸ್ಟೋರೆಂಟ್ ನಲ್ಲಿ ಗಲಾಟೆ ಮಾಡಿದ್ದು ನಮ್ಮ ಬಾರ್ ಆ್ಯಂಡ್ ರೆಸ್ಟೋರೆಂಟ್ ನಲ್ಲಿರುವ ಸಿಸಿಟಿವಿ ಕ್ಯಾಮರಾದಲ್ಲಿ ರೆಕಾರ್ಡ ಆಗಿತ್ತು. ಪೊಲೀಸರು ಸಿಸಿಟಿವಿ ನಲ್ಲಿದ್ದ ರೆಕಾರ್ಡ ನ್ನು ಪೆನಡ್ರೈವ್ ಗೆ ಹಾಕಿ ಮಹಜರ ಮಾಡಿದರು. ಸಾಕ್ಷಿದಾರರಿಗೆ ಮತ್ತೊಂದು ಮಹಜರನ್ನು ತೋರಿಸಲಾಗಿ, ಸಾಕ್ಷಿ ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸುತ್ತಾರೆ. ಮಹಜರನ್ನು ನಿಪಿ-5 ಅಂತ, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಅಂತ ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದಿರುವಂತಹ ಪೋಟೋವನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-6 ಅಂತ ಗುರುತಿಸಲಾಯಿತು. ಆ ಪೆನಡ್ರೈವ್ ನ್ನು ನೋಡಿದರೆ ಗುರುತಿಸುತ್ತೇನೆ. ಪೆನಡ್ರೈವ್ ಸೀಲ್ ಬಟ್ಟೆಯಲ್ಲಿದ್ದು, ಅದನ್ನು ತೆರೆದ ನ್ಯಾಯಾಲಯದಲ್ಲಿ ಓಪನ್ ಮಾಡಿ ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿ ಅದನ್ನು ನೋಡಿ ಗುರುತಿಸುತ್ತಾರೆ. ಆ ಪೆನಡ್ರೈವ್ Scan Disk ಕಂಪನಿಯದ್ದಾಗಿರುತ್ತದೆ. ಅದನ್ನು ಮು.ಮಾ.2 ಅಂತ ಗುರುತಿಸಲಾಯಿತು. ಆ Scan disk pendrive ನ್ನು ಸಂಬಂಧಪಟ್ಟ ಪೊಲೀಸ್ ಠಾಣೆಯ ಲ್ಯಾಪ್ ಟಾಪ್ ನಲ್ಲಿ ಹಾಕಿ ಪ್ಲೇ ಮಾಡಿ ಸಾಕ್ಷಿಗೆ ತೋರಿಸಲಾಯಿತು. ಈ ದೃಶ್ಯಾವಳಿ 2 ನಿಮಿಷ 11 ಸೆಕೆಂಡ್ ಅವಧಿ ಇದ್ದು, Black colour T-shirt ಹಾಕಿಕೊಂಡಿರುವಂತಹ ವ್ಯಕ್ತಿ 1 ನೇ ಆರೋಪಿ ಇರುತ್ತಾನೆ, 1 ನೇ ಆರೋಪಿಯು ಮೊದಲು ಕೌಂಟರ್ ಹತ್ತಿರ ಬಂದು ಗಲಾಟೆ ಮಾಡುತ್ತಿರುವುದು ಕಂಡು ಬರುತ್ತದೆ. Distemper colour ಧರಿಸಿದ

2 ನೇ ಆರೋಪಿ ಇರುತ್ತಾನೆ. ಕೇಸರಿ ಬಣ್ಣದ ಶರ್ಟ ಧರಿಸಿರುವವರು ಗಾಲಟೆ ಬಿಡಿಸಿದವರು ಇರುತ್ತಾರೆ. ಗಲಾಟೆ ಬಿಡಿಸಿದ ನಂತರ ಅವರನ್ನು ಹೊರಗಡೆ ಕರೆದುಕೊಂಡರು ಹೋದರು. ಆ ದಿನ ಕ್ಯಾಶ್ ಕೌಂಟರ್ ನಲ್ಲಿ ನಾನೇ ಇದ್ದೆ. ಮೊದಲು ಸಂತೋಷ ಎಂಬುವವರು ನನಗೆ ಹೊಡೆದರು. ಸಂತೋಷರವರು ಚಾಕುವನ್ನು ತಮ್ಮ ಬಲ ಹಿಂಭಾಗದಲ್ಲಿ ಹಿಡಿದುಕೊಂಡಿದ್ದರು, ಚಾಕು ಹಾಕುತ್ತೇನೆ ಅಂತ ಹೆದರಿಸುತ್ತಾ ಇದ್ದರು. 1 ನೇ ಆರೋಪಿ ಎಲ್ಲರಿಗೂ ಬೈದಾಡಿ ತಬ್ಬಾಡುತ್ತಿದ್ದರುವುದು, 1 ನೇ ಆರೋಪಿತನು ಮಂಜುನಾಥರವರ ಕುತ್ತಿಗೆ ಹಿಡಿದು ತಬ್ಬಿರುವುದು ದೃಶ್ಯಾವಳಿಯಲ್ಲಿ ಕಂಡು ಬರುತ್ತದೆ. ಅದರಲ್ಲಿ ಕಾಣುತ್ತಿರುವ ಚಾಕು ನ್ಯಾಯಾಲಯದ ಮುಂದೆ ಇರುವ ಮು.ಮಾ.1 ಇರುತ್ತದೆ. ಆ ಸಮಯದಲ್ಲಿ 2 ನೇ ಆರೋಪಿಯು ಕೌಂಟರ್ ನ ಹೊರಭಾಗದಲ್ಲಿದ್ದರು. ನ್ಯಾಯಾಲಯಕ್ಕೆ ಹಾಜರುಪಡಿಸಿರುವಂತಹ ಸಿಡಿಯನ್ನು ಸಂಬಂಧಪಟ್ಟ ಪೊಲೀಸ್ ಠಾಣೆಯ ಲ್ಯಾಪಟಾಪ್ ನಲ್ಲಿ ಹಾಕಿ ಅದರಲ್ಲಿರುವ 05 ಪೋಟೋಗಳನ್ನು ಸಾಕ್ಷಿಗೆ ತೋರಿಸಲಾಯಿತು. ಆ ಪೋಟೋಗಳು ನಿಪಿ-2 ಮತ್ತು 5 ರ ಮಹಜರ ಮಾಡುವ ಕಾಲಕ್ಕೆ ತೆಗೆದ ಪೋಟೋಗಳು ಇರುತ್ತದೆ. ನಿಪಿ-3, 4, 6 ರ ಪೋಟೋಗಳನ್ನು ತೆಗೆದಿದ್ದು, ಅವುಗಳನ್ನು ಸಿಡಿಯಲ್ಲಿ ಅಳವಡಿಸಿರುತ್ತಾರೆ ಮತ್ತು ಈ ಪ್ರಕರಣಕ್ಕೆ ಸಂಬಂಧಪಟ್ಟ ಇತರೆ 5 ಪೋಟೋಗಳು ಸಿಡಿಯಲ್ಲಿ ಇರುತ್ತವೆ. ಸಿಡಿಯನ್ನು ನಿಪಿ-7 ಅಂತ ಗುರುತಿಸಲಾಯಿತು. ನನಗೆ ಮತ್ತು ಬಾರ್ ಮಾಲೀಕರಾದ ಚಾಸಾ-6 ಮತ್ತು ನಮ್ಮ ಜೊತೆ ಕೆಲಸ ಮಾಡುತ್ತಿದ್ದ ಚಾಸಾ-7 ರವರನ್ನು ಕೊಲೆ ಮಾಡುವ ಉದ್ದೇಶದಿಂದ 1 ಮತ್ತು 2 ನೇ ಆರೋಪಿತರು ಚಾಕುವಿನಿಂದ ಹಲ್ಲೆ ಮಾಡಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರವಾಗಿ**:

ವಕೀಲರು ಸಮಯ ಕೋರಿರುತ್ತಾರೆ ಮತ್ತು ಕಲಂ.231 ರ ಅರ್ಜಿಯನ್ನು ಸಲ್ಲಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.